ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: SPG bill passed in LS

ಪತ್ರಿಕೆಯ ಹೆಸರು : NAME OF THE NEWS PAPER : Vijayavani ದಿನಾಂಕ : DATE : 28.11.2019

ಪ್ರಧಾನಮಂತ್ರಿಗೆ ಮಾತ್ರ ವಿಶೇಷ ಭದ್ರತಾ ದಳ ರಕ್ಷಣೆ | ಸದನದಿಂದ ಹೊರನಡೆದ ಕಾಂಗ್ರೆಸ್

# ಎಸ್‌ಪಿಜಿ ಮಸೂದೆ ಅಂಗೀಕರಿಸಿದ ಲೋಕಸಭೆ

ನವದೆಹಲಿ: ವಿಪಕ್ಷಗಳ ತೀವ್ರ ವಿರೋಧದ ನಡುವೆಯೂ ಕೇಂದ್ರ ಸರ್ಕಾರ ಬುಧವಾರ ಲೋಕಸಭೆಯಲ್ಲಿ ಎಸ್‌ಪಿಜಿ (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಿದೆ. ಕೇಂದ್ರದ ನಡೆಗೆ ಆಕ್ರೋಶಗೊಂಡ ಕಾಂಗ್ರೆಸ್ ಸಂಸದರು ಸದನದಿಂದ ಹೊರನಡೆದರು.



ಗೃಹ ಸಚಿವ ಅಮಿತ್ ಷಾ, ವಿಶೇಷ ಭದ್ರತಾ ದಳ (ತಿದ್ದುಪಡಿ) ಮಸೂದೆಯಲ್ಲಿ ಈ ಹಿಂದೆ ಮಾಡಲಾದ ಬದಲಾವಣೆಗಳನ್ನು ಒಂದು ಕುಟುಂಬವನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. ಇದೇ ಮೊದಲ ಬಾರಿಗೆ ಪ್ರಧಾನಮಂತ್ರಿಗಳನ್ನು ಗಮನದಲ್ಲಿಟ್ಟುಕೊಂಡು ಎಸ್‌ಪಿಜಿ ಮಸೂದೆಯಲ್ಲಿ ತಿದ್ದುಪಡಿ ತರಲಾಗುತ್ತಿದೆ. ಆದರೆ ಗಾಂಧಿ ಕುಟುಂಬದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಬಿಂಬಿಸಲು ಪ್ರಯತ್ನಿಸಲಾಗುತ್ತಿದೆ. ಸರ್ಕಾರ ಅವರ ಭದ್ರತೆ ಹಿಂಪಡೆದಿಲ್ಲ. ಬೆದರಿಕೆಯ ಆಧಾರದ ಮೇಲೆ ಭದ್ರತೆಯಲ್ಲಿ ಬದಲಾವಣೆ ಮಾಡಲಾಗಿದೆ ಅಷ್ಟೆ ಎಂದಿದ್ದಾರೆ.

## ಲೋಕಸಭೆಯಲ್ಲಿ ದಾಖಲೆ




ಮೌಖಿಕ ಉತ್ತರಗಳಿಗಾಗಿ ಪಟ್ಟಿ ಮಾಡಲಾದ 20 ಪ್ರಶ್ನೆಗಳನ್ನು ಸದನ ಆರಂಭದ ಮೊದಲ ಗಂಟೆಯಲ್ಲೇ ಮುಕ್ತಾಯಗೊಳಿಸಿ ಲೋಕಸಭೆ ದಾಖಲೆ ಬರೆದಿದೆ. ಇದಕ್ಕೆ ಎಲ್ಲ ಸದಸ್ಯರನ್ನು ಸ್ಪೀಕರ್ ಓಂ ಬಿರ್ಲಾ ಅಭಿನಂದಿಸಿದರು.

ಅನೇಕ ದೇಶಗಳು ವಿಶೇಷ ಭದ್ರತಾ ಪಡೆಗಳನ್ನು ಹೊಂದಿದ್ದು, ಅವುಗಳು ಆಯಾ ರಾಷ್ಟ್ರದ ಮುಖ್ಯಸ್ಥರಿಗೆ ಮಾತ್ರ ಭದ್ರತೆ ನೀಡುತ್ತವೆ. ಎಸ್‌ಪಿಜಿ ಎಂದರೆ ದೈಹಿಕ ರಕ್ಷಣೆಗೆ ಸಂಬಂಧಿಸಿದ್ದು ಎಂಬ ತಪ್ಪು ಕಲ್ಪನೆ ಅಸ್ತಿತ್ವದಲ್ಲಿದೆ. ಎಸ್‌ಪಿಜಿ ಪ್ರಧಾನಮಂತ್ರಿ ಕಚೇರಿ, ಅವರ ಆರೋಗ್ಯ ಹಾಗೂ ಸಂವಹನವನ್ನೂ ಒಳಗೊಂಡಿದೆ. ಹೀಗಾಗಿ ಎಸ್‌ಪಿಜಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸರ್ಕಾರ ಕೆಲಸ ಮಾಡುತ್ತಿದೆ ಎಂದು ಅಮಿತ್ ಷಾ ಮಾಹಿತಿ ನೀಡಿದರು.

ಭಾರತದಲ್ಲಿ ಆರ್ಥಿಕತೆ ನಿಧಾನಗತಿಯಲ್ಲಿರಬಹುದು. ಆದರೆ ಆರ್ಥಿಕ ಹಿಂಜರಿತದ ಭಯವಿಲ್ಲ. 2009-14ರ ನಡುವೆ ಶೇ.6.4 ಇದ್ದ ಜಿಡಿಪಿ 2014-19ರ ನಡುವೆ ಶೇ.7.5ರಷ್ಟಿದೆ.

| ನಿರ್ಮಲಾ ಸೀತಾರಾಮನ್ ಹಣಕಾಸು ಸಚಿವೆ

## ಸೆಣಬಿನ ಚೀಲ ಕಡ್ಡಾಯ

ಸೆಣಬಿನ ಉದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ ಆಹಾರಧಾನ್ಯ ಹಾಗೂ ಸಕ್ಕರೆಯನ್ನು ಕಡ್ಡಾಯವಾಗಿ ಸೆಣಬಿನ ಚೀಲಗಳಲ್ಲೇ ಪ್ಯಾಕ್ ಮಾಡಬೇಕೆಂಬ ಮಾನದಂಡಗಳನ್ನು ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಶೇ.100ರಷ್ಟು ಆಹಾರ ಧಾನ್ಯಗಳು ಮತ್ತು ಶೇ.20 ಸಕ್ಕರೆಯನ್ನು ಕಡ್ಡಾಯವಾಗಿ ಸೆಣಬಿನ ಚೀಲಗಳಲ್ಲೇ ಪ್ಯಾಕ್ ಮಾಡಬೇಕು. ಇದರಿಂದ ಪಶ್ಚಿಮಬಂಗಾಳ, ಬಿಹಾರ, ಒಡಿಶಾ, ಅಸ್ಸಾಂ, ಆಂಧ್ರಪ್ರದೇಶ, ಮೇಘಾಲಯ ರಾಜ್ಯಗಳ ರೈತರು ಮತ್ತು ಕಾರ್ಮಿಕರಿಗೆ ಲಾಭವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.